# **<u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>**

**Ref**: 20/2024

ಡಬ್ಲ್ಯೂಡಬ್ಲ್ಯೂ-2

**<u>ದಿನಾಂಕ 15.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಮುಂದುವರೆದ ಪಾಟೀ ಸವಾಲುಃ 2 ನೇ ಪಕ್ಷಗಾರರ ಪರ ಶ್ರೀ.ಜೆ.ಪಿ. ವಕೀಲರಿಂದಃ**

ನಿ.ಡಬ್ಲ್ಯೂ-2 ರ ದಾಖಲೆಯೂ ನೋಟರೈಸ್ಡ್ ದಾಖಲೆ ಆಗಿರುತ್ತದೆ ಎಂದರೆ ಸರಿ. ಸದರಿ ದಾಖಲೆ ನಿಯಮ 59 ರ ಕರ್ನಾಟಕ ಕೈಗಾರಿಕ ಕಾಯ್ದಿ ಅಡಿಯಲ್ಲಿ ನೋಂದಣಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ನೋಟರೈಸ್ಡ್ ಮಾಡಿ ಈ ಪ್ರಕರಣಕೋಸ್ಕರ ಅದರ ಮೇಲೆ ಕಾರ್ಮಿಕ ಇಲಾಖೆಯವರು ಮೊಹರನ್ನು ಹಾಕಿಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಯು ಮೂಲ ದಾಖಲೆ ಆಗಿರುವುದಿಲ್ಲ, ಅದು ದೃಢಿಕೃತ ಪ್ರತಿ ಆಗಿರುತ್ತದೆ ಎಂದರೆ ಸರಿ. ಈ ಪ್ರಕರಣಕೋಸ್ಕರ ಸದರಿ ಒಡಂಬಡಿಕೆ ಪತ್ರವನ್ನು ಸೃಷ್ಟಿ ಮಾಡಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಒಡಂಬಡಿಕೆಯಲ್ಲಿ ನನ್ನ ಸಹಿ ಇರುವುದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆ ನನ್ನ ಹೆಸರು ಇರುತ್ತದೆ ಎನ್ನುತ್ತಾರೆ. ಸಾಕ್ಷಿ ಸದರಿ ದಾಖಲೆಯ ಸೀರ್ಯಲ್ ನಂ.12 ರಲ್ಲಿ ತನ್ನ ಹೆಸರು ನಮೂದು ಇರುವುದನ್ನು ತೋರಿಸಿರುತ್ತಾರೆ.

ನಿ.ಡಬ್ಲ್ಯೂ-2 ರ ದಾಖಲೆಯಲ್ಲಿ Annexure-B ಅನ್ನು ಸೃಷ್ಟಿ ಮಾಡಿ ತಂದ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್ ಅವರ ಕುಟುಂಬಸ್ಥರ ಜೊತೆ ವಾಸ ಮಾಡುತ್ತಿರುವ ಜಾಗ ಪ್ಯಾಲೇಸ್ ಅಥವಾ ಅರಮನೆ ಆಗಿರುತ್ತದೆ ಎಂದರೆ ಹೌದು. Regency stud farm ಅನ್ನುವ ಸಂಸ್ಥೆ ಇಲ್ಲ ಎಂದರೆ ಸರಿಯಲ್ಲ. ಸದರಿ stud farm ನಲ್ಲಿ ಏನೇನೇ ಕೆಲಸಗಳನ್ನು ಮಾಡುತ್ತಾರೆ ಎಂದರೆ ಕುದುರು, ಆನೆ, ಒಂಟೆ, ಹಸುಗಳನ್ನು ನೋಡಿಕೊಳ್ಳುವ ಜಾಗ ಎನ್ನುತ್ತಾರೆ.

ಸದರಿ ಜಾಗದಲ್ಲಿ ನಾನು ಆನೆ ಮಾವುತನಾಗಿ ಕೆಲಸ ಮಾಡುತ್ತಿದ್ದೇ ಎಂದರೆ ಸರಿ. ಸದರಿ ಜಾಗವು ರಾಜ ವಂಶಸ್ತರಿಗೆ ಸೇರಿದ ಜಾಗವಾಗಿರುತ್ತದೆ ಎಂದರೆ ಸರಿ. ಆದು ಖಾಸಗಿ ಸ್ಥಳವಾಗಿದ್ದು ಸಾರ್ವಜನಿಕರನ್ನು ಅಲ್ಲಿಗೆ ಬಿಡುವುದಿಲ್ಲ ಎಂದರೆ ಸರಿ. ಆಗಾಗೆ ನಾನು ಬಂದು ಆನೆಗಳನ್ನು ಅರಮನೆಯಲ್ಲಿ ಬಂದು ನೋಡುತ್ತಿದ್ದೆ ಎಂದರೆ ಸಾಕ್ಷಿ ಕಾರ್ಮಿಕನಾಗಿ ಅಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಕಾರ್ಮಿಕನಾಗಿ ಅಲ್ಲಿಕೆಲಸ ಮಾಡುತ್ತಿರಲ್ಲಿ ನಾನು ಗೌರದನದ ಆಧಾರ ಮೇಲೆ ಅಲ್ಲಿ ಕೆಲಸ ಮಾಡುತ್ತಿದ್ದೆ ಆಗ್ಗಾಗೆ ನಾನು ಆನೆಗಳನ್ನು ನೋಡಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ನಿ.ಡಬ್ಲ್ಯೂ-2 ರ ದಾಖಲೆಯು ಕಾನೂನಾತ್ಮಕ ನೊಂದಣಿ ಆಗಿಲ್ಲದೆ ಇರುವುದರಿಂದ ಸದರಿ ದಾಖಲೆಗೆ ಯಾವುದೇ ಮೌಲ್ಯ ಇಲ್ಲ ಎಂದರೆ ಸರಿಯಲ್ಲ.

Regency stud farm ಎನ್ನುವ ಸಂಸ್ಥೆ ಮೈಸೂರಿನಲ್ಲಿ ಇರುವುದಿಲ್ಲ, ಪುನಾದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ರೀತಿಯ ವಾಣಿಜ್ಯ ವಹಿವಾಟು ಇರುವುದಿಲ್ಲ ಎಂದರೆ ಸರಿ. ಅರಮನೆಯಲ್ಲಿ ಒಟ್ಟು 7 ಒಂಟೆಗಳು ಇದ್ದವು, ಈಗ 2 ಒಂಟೆಗಳು ಇರುತ್ತವೆ. ಒಂಟೆಗಳನ್ನು ನೋಡಿಕೊಳ್ಳಲು ಒಟ್ಟು 3 ಜನ ಇದ್ದೇವು. 5 ಒಂಟೆಗಳ ಪೈಕಿ 3 ಒಂಟೆಗಳಿಗೆ ಗಾಯಗಳು ಆಗಿ ತೀರಿಕೊಂಡು ಹೋಗಿರುತ್ತವೆ. ಸದರಿ 7 ಒಂಟೆಗಳನ್ನು ನೋಡಿಕೊಳ್ಳಲು 3 ಜನ ಇದ್ದರು. ಈಗ 2 ಒಂಟೆಗಳನ್ನು ನೋಡಿಕೊಳ್ಳಲು ಒಬ್ಬರು ಇರುತ್ತಾರೆ. ಈಗ 2 ಒಂಟೆಗಳನ್ನು ನೋಡಿಕೊಳ್ಳಲು ಒಬ್ಬರು ಸಾಕಾಗಿರುವುದರಿಂದ ನಾನು ಬರುವುದನ್ನು ನಿಲ್ಲಿಸಿದೆ ಎಂದರೆ ಸರಿಯಲ್ಲ. ನಾನು ನೌಕರನಾಗಿ ನಾಗಿರಲ್ಲಿ ಆಗ್ಗಾಗಿ ಬಂದು ಒಂಟೆಯನ್ನು ನೋಡಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ಈಗ 2 ಒಂಟೆಗಳನ್ನು ನೋಡಿಕೊಳ್ಳಲು ಒಬ್ಬರು ಸಾಕು ಹಾಗಾಗಿ ನಾನು ಕೆಲಸಕ್ಕೆ ಬರುತ್ತಿಲ್ಲ ಎಂದರೆ ಸರಿಯಲ್ಲ.

ನಾನು ಅರಮನೆಯಲ್ಲಿ ಯಾವುದೇ ಕೆಲಸ ಮಾಡುತ್ತಿರಲ್ಲಿ, ಆದರೆ ಸ್ವಇಚ್ಚೆಯಿಂದ ಸೇವೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಿ.ಡಬ್ಲ್ಯೂ-5 ರ ದಾಖಲೆಯನ್ನು ಕೋವಿಡ್ ಸಂಬಂಧ ಗುರುತಿನ ಚೀಟಿಯಾಗಿ ಕೊಟ್ಟಿದ್ದರು ಎಂದರೆ ಸರಿಯಲ್ಲ.

ನಮ್ಮ ಮತ್ತು ಶ್ರೀಮತಿ.ಪ್ರಮೋದಾ ದೇವಿ ಒಡೆಯರ್ ರವರ ನಡುವೆ ಮಾಲೀಕಾ ಹಾಗೂ ಕಾರ್ಮಿಕ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿ.ಎಂ.2 ರ ದಾಖಲೆಯನ್ನು ನಾನು ಈ ಪ್ರಕರಣಕೋಸ್ಕರ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅರಮನೆಯಲ್ಲಿ ಗೋಶಾಲೆ, ಗಜಶಾಲೆ ಎಂದು ಪ್ರಾಣಿಗಳಿಗೋಸ್ಕರ ಜಾಗ ಗುರುತಿಸಿಕೊಂಡು ಇಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಯಾವತ್ತು ಅರಮನೆಯಲ್ಲಿ ಕೆಲಸಗಾರನಾಗಿರಲ್ಲಿ ಆದ್ದರಿಂದ ನನ್ನನ್ನು ಕೆಲಸದಿಂದ ತೆಗೆಯುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ಆನೆ ನೋಡಿಕೊಳ್ಳು ಕೆಲಸ industry ಎಂಬ ಪದ ಪದದಲ್ಲಿ ಬರುವುದಿಲ್ಲ ಆದ್ದರಿಂದ ಸದರಿ ಪ್ರಕರಣ ಉರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ಸ್ವಇಚ್ಚೆಯಿಂದ ಅರಮನೆಯಲ್ಲಿ ಸೇವೆ ಮಾಡುತ್ತಿದ್ದ ಕಾರಣ ನಾನು ನೌಕರ ಎಂಬ ಪದದ ಅರ್ಥದಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ. ನಿ.ಎಂ.1 ರಿಂದ 7 ರ ದಾಖಲೆಗಳನ್ನು ನಾನು ಈ ಪ್ರಕರಣ ದಾಖಲು ಮಾಡುವ ಸಮಯದಲ್ಲಿ ಹಾಜರು ಪಡಿಸಿರಲಿಲ್ಲ.

ಆಡಳಿತ ವರ್ಗದವರು ಕೇಳಿದ ಕಾರಣ ನಾನು ಸದರಿ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ ಎಂದರೆ ಸರಿ. ಸದರಿ ದಾಖಲೆಗಳನ್ನು ನನ್ನ ಪ್ರಕರಣದ ಜೊತೆಯಲ್ಲಿ ಹಾಜರು ಪಡಿಸಲು ನನಗೆ ಏನು ತೋಂದರೆ ಇರಲಿಲ್ಲ. ಆಡಳಿತ ವರ್ಗದವರು ನಾನು ಯೂನಿಯನ್ ಸದಸ್ಯ ಅಲ್ಲ ಎಂದು ಹೇಳಿದ ಕಾರಣ ಸದರಿ ದಾಖಲೆಗಳನ್ನು ಸೃಷ್ಟಿಸಿ ನಾನು ನ್ಯಾಯಾಲಯ ಮುಂದೆ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**